## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 857 |
| 2 | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 13-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು (ಸಂಸ್ಕರಣಾ ಘಟಕಗಳನ್ನು ಒಳಗೊಂಡಂತೆ) ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ ವಾರ್ಷಿಕವಾಗಿ ವೆಚ್ಚ ಮಾಡುತ್ತಿರುವ ಮೊತ್ತವೆಷ್ಟು? ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಬಿಎಂಪಿ/ ಎರವಲು/ ಏಜೆನ್ಸಿ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಥಮಿಕ ಘನತ್ಯಾಜ್ಯ ಸಂಗ್ರಹಣೆ ಮತ್ತು ದ್ವಿತೀಯ ಹಂತದ ಸಾಗಾಣಿಕೆ (ಸಂಸ್ಕರಣಾ ಘಟಕಗಳನ್ನು ಒಳಗೊಂಡಂತೆ) ಕಾರ್ಯ, ತ್ಯಾಜ್ಯ ಸಂಸ್ಕರಣಾ / ಕಾರ್ಯಾಚರಣೆ ಹಾಗೂ ನಿರ್ವಹಣೆ, ವೈಜ್ಞಾನಿಕ ಭೂಭರ್ತಿ ಘಟಕಗಳ ನಿರ್ವಹಣೆಗಾಗಿ ವಾರ್ಷಿಕವಾಗಿ ಅಂದಾಜು ರೂ.670.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಸದರಿ ಪಾವತಿಯನ್ನು ಪಾಲಿಕೆ ವತಿಯಿಂದ ಮಾಡಲಾಗುತ್ತಿರುತ್ತದೆ.<br><br>ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿಯಲ್ಲಿ ಪಾಲಿಕೆಯ / ಸರ್ಕಾರದಿಂದ ಎರವಲು / ನಿಯೋಜನೆ ಮೇರೆಗೆ 35 ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಹೊರಗುತ್ತಿಗೆ ಆಧಾರಿತವಾಗಿ 19 ಸಿಬ್ಬಂದಿಗಳು ಹಾಗೂ ಒಳಗುತ್ತಿಗೆ ಆಧಾರದಲ್ಲಿ 3 ಸಿಬ್ಬಂದಿಗಳು ಒಟ್ಟು 57 ಸಿಬ್ಬಂದಿ / ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಆ) | ವಾರ್ಡ್ ಮಟ್ಟದಲ್ಲಿ ಏಜೆನ್ಸಿ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್‌ಗಳಿಗೆ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕೆಲಸ ಕಾರ್ಯಗಳಲ್ಲಿ ಹೊಂದಿರುವ ವಿದ್ಯಾರ್ಹತೆ ಮತ್ತು ಅನುಭವದ ಬಗ್ಗೆ ಮಾಹಿತಿ ನೀಡುವುದು; | ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲು ಏಜೆನ್ಸಿ ರವರೊಂದಿಗೆ ದಿನಾಂಕ: 22-08-2019 ರಂದು ಪಾಲಿಕೆಯು ಮಾಡಿಕೊಂಡಿರುವ ಕರಾರು ಒಪ್ಪಂದದಲ್ಲಿ ನಿವೃತ್ತ ಸೈನಿಕ ಅಥವಾ ಎನ್.ಸಿ.ಸಿ 'ಸಿ' ಪ್ರಮಾಣ ಪತ್ರವನ್ನು ಹೊಂದಿರುವವರನ್ನು ವಾರ್ಡ್ ಮಾರ್ಷಲ್‌ಗಳನ್ನಾಗಿ ನಿಯೋಜಿಸಲು ಸೂಚಿಸಲಾಗಿರುತ್ತದೆ. ಅದರಂತೆ, ನಿವೃತ್ತ ಸೈನಿಕ ಅಥವಾ ಎನ್.ಸಿ.ಸಿ. 'ಸಿ' ಪ್ರಮಾಣ ಪತ್ರವನ್ನು ಹೊಂದಿರುವವರನ್ನು ಮಾರ್ಷಲ್‌ಗಳನ್ನಾಗಿ ಏಜೆನ್ಸಿ ರವರು ನಿಯೋಜಿಸಿರುತ್ತಾರೆ. |
| ಇ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಯಿಂದ ಪದೋನ್ನತಿಗಾಗಿ ಉನ್ನತೀಕರಿಸಲಾದ/ ಸೃಜಿಸಲಾದ ಹೆಲ್ತ್ ಸೂಪರ್ ವೈಸರ್ ಗ್ರೂಪ್-ಬಿ ಹುದ್ದೆಗಳ ಸಂಖ್ಯೆ ಎಷ್ಟು; ಸದರಿ ಹೆಲ್ತ್ ಸೂಪರ್‌ವೈಸರ್‌ರವರನ್ನು ಯಾವ ಮಟ್ಟದಲ್ಲಿ (ವಾರ್ಡ್ / ಉಪ ವಿಭಾಗ / ವಿಭಾಗ) ನಿಯೋಜಿಸಲಾಗಿದೆ; ಇವರುಗಳ ವೇತನ ಮತ್ತು ಭತ್ಯೆಗಳ ವಿವರ ನೀಡುವುದು; | • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಯಿಂದ ಪದೋನ್ನತಿಗಾಗಿ ಉನ್ನತೀಕರಿಸಲಾದ / ಸೃಜಿಸಲಾದ ಹೆಲ್ತ್ ಸೂಪರ್‌ವೈಸರ್ ಗ್ರೂಪ್-ಬಿ ಹುದ್ದೆಗಳ ಸಂಖ್ಯೆ: 75.<br>• ಸದರಿ ಹೆಲ್ತ್ ಸೂಪರ್‌ವೈಸರ್ ರವರನ್ನು ಉಪ ವಿಭಾಗಗಳಲ್ಲಿ ನಿಯೋಜಿಸಲಾಗಿರುತ್ತದೆ.<br>• ಸದರಿ ಹೆಲ್ತ್ ಸೂಪರ್ ವೈಸರ್ ಹುದ್ದೆಗೆ ರೂ.69,250-1,34,200/- ಗಳ ವೇತನವನ್ನು ನಿಗಧಿಪಡಿಸಲಾಗಿರುತ್ತದೆ. |

| | | |
|---|---|---|
| ಈ) | ಹೆಲ್ತ್ ಸೂಪರ್‌ವೈಸರ್ ಹುದ್ದೆಗೆ ಕರ್ನಾಟಕ ಸರ್ಕಾರ ನಗರಾಭಿವೃದ್ಧಿ ಇಲಾಖೆಯಿಂದ ನಿಗಧಿಪಡಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳೇನು; ಸದರಿ ನಗರಾಭಿವೃದ್ಧಿ ಇಲಾಖೆಯ ಆದೇಶದಂತೆ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕೆಲಸ-ಕಾರ್ಯಗಳನ್ನು ನಿರ್ವಹಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ ನೀಡಲಾಗಿರುವ ಆದೇಶವೇನು; (ಆದೇಶದ ಪ್ರತಿ ನೀಡುವುದು) | • ಹೆಲ್ತ್ ಸೂಪರ್‌ವೈಸರ್‌ಗಳಿಗೆ ನಿಗಧಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ: ನಅಇ 266 ಎಂಎನ್‌ಯು 2022, ದಿನಾಂಕ: 24-03-2023ರ ಪ್ರತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ.<br>• ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ವತಿಯಿಂದ ಯಾವುದೇ ಆದೇಶ ನೀಡಿರುವುದಿಲ್ಲ. |
| ಉ) | ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಒಳಗೊಂಡಂತೆ ನಗರ ಆರೋಗ್ಯ ಪ್ರಾಥಮಿಕ ಕೇಂದ್ರ, ನಮ್ಮ ಕ್ಲಿನಿಕ್, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಉದ್ದಿಮೆ ಪರವಾನಗಿಗಳ ಮೇಲ್ವಿಚಾರಣೆ ಮತ್ತು ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ ಇಲಾಖೆಯಿಂದ ಹೆಲ್ತ್ ಸೂಪರ್‌ವೈಸರ್‌ಗಳಿಗೆ ನೀಡಲಾದ ಆದೇಶದ ಪ್ರತಿ ನೀಡುವುದು; | ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಒಳಗೊಂಡಂತೆ ನಗರ ಆರೋಗ್ಯ ಪ್ರಾಥಮಿಕ ಕೇಂದ್ರ, ನಮ್ಮ ಕ್ಲಿನಿಕ್, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಉದ್ದಿಮೆ ಪರವಾನಗಿಗಳ ಮೇಲ್ವಿಚಾರಣೆ ಮತ್ತು ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ ಇಲಾಖೆಯಿಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ. |
| ಊ) | ನಗರಾಭಿವೃದ್ಧಿ ಇಲಾಖೆಯ ಆದೇಶದಂತೆ ಪೌರಕಾರ್ಮಿಕರು, ಮೇಲ್ವಿಚಾರಕರು, ಕಿರಿಯ ಆರೋಗ್ಯ ಪರಿವೀಕ್ಷಕರ ಮೇಲ್ವಿಚಾರಣೆಗಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯಿಂದ ಹೆಲ್ತ್ ಸೂಪರ್‌ವೈಸರ್‌ಗಳಿಗೆ ಕರ್ತವ್ಯಕ್ಕೆ ನಿಯೋಜಿಸಲಾದ ಆದೇಶದ ಪ್ರತಿ ನೀಡುವುದು ಮತ್ತು ಆದೇಶದ ಪ್ರತಿ ನೀಡದಿದ್ದಲ್ಲಿ ಇದಕ್ಕೆ ಕಾರಣಗಳೇನು? | ಸರ್ಕಾರದ ಆದೇಶ ಸಂಖ್ಯೆ: ನಅಇ 266 ಎಂಎನ್‌ಯು 2022, ದಿನಾಂಕ: 24-03-2023 ರಂತೆ ಪೌರಕಾರ್ಮಿಕರು, ಮೇಲ್ವಿಚಾರಕರು, ಕಿರಿಯ ಆರೋಗ್ಯ ಪರಿವೀಕ್ಷಕರ ಮೇಲ್ವಿಚಾರಣೆಗಾಗಿ ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯಿಂದ ಹೆಲ್ತ್ ಸೂಪರ್‌ವೈಸರ್‌ಗಳಿಗೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ. |

**ನಅಇ 138 ಎಂಎನ್‌ವೈ 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:**

1. ಬಿಬಿಎಂಪಿಯ ವೃಂದ ಮತ್ತು ನೇಮಕಾತಿ ನಿಯಮಾವಳಿ ಅಧಿಸೂಚನೆ ಸಂಖ್ಯೆ: ಯುಡಿಡಿ 90 ಎಂಎನ್ ಯು 2014 (ಪಿ-1) ದಿನಾಂಕ: 16-03-2020.
2. ವಿಶೇಷ ಆಯುಕ್ತರು (ಆಡಳಿತ), ಬಿಬಿಎಂಪಿ ರವರ ಪತ್ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/08-09, ದಿನಾಂಕ: 09-03-2022.
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ (ನೊ). ಬೆಂಗಳೂರು ರವರು/ ಹಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ ಇವರುಗಳ ಮನವಿ ದಿನಾಂಕ: 17-05-2022 ಮತ್ತು 21-05-2022.
4. ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 266 ಎಂಎನ್ ಯು 2022, ದಿನಾಂಕ: 30-07-2022.
5. ಉಪ ಆಯುಕ್ತರು (ಆಡಳಿತ), ಬಿಬಿಎಂಪಿ ರವರ ಪತ್ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)ಪಿಆರ್/01/08-09-2022-23, ದಿನಾಂಕ: 02-09-2022.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 16-03-2020ರ ಅಧಿಸೂಚನೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಿ ಸದರಿ ನಿಯಮಾವಳಿಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪ್ರಸ್ತಾವನೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚಾಲ್ತಿಯಲ್ಲಿದ್ದ 1971ರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಷ್ಕರಿಸುವ ಸಲುವಾಗಿ ಪಾಲಿಕೆಯಿಂದ ದಿನಾಂಕ: 21-03-2019ರ ರೀತ್ಯಾ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕೆಲವೊಂದು ಅನಗತ್ಯ ಹುದ್ದೆಗಳನ್ನು ರದ್ದುಪಡಿಸುವುದು, ಪ್ರಸ್ತುತ ಪಾಲಿಕೆಯ ಕಾರ್ಯಸ್ವರೂಪದನ್ವಯ ಕೆಲವೊಂದು ಹೊಸ ಹುದ್ದೆಗಳನ್ನು ಸೃಜಿಸುವುದು ಹಾಗೂ ಹಾಲಿ ಪಾಲಿಕೆಯಲ್ಲಿ ಮಂಜೂರಾತಿ ಆದೇಶವಿಲ್ಲದೇ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವೊಂದು ವೃಂದದ ಹುದ್ದೆಗಳಿಗೆ ಮಂಜೂರಾತಿಯನ್ನು ಒಳಗೊಂಡಂತೆ ಒಟ್ಟು 18091 ಹುದ್ದೆಗಳನ್ನು ಮಂಜೂರಾತಿ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು,

ಸರ್ಕಾರದ ದಿನಾಂಕ: 16-03-2020ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಅಂತಿಮಗೊಳಿಸಿ, ಒಟ್ಟಾರೆ 12,614 ಹುದ್ದೆಗಳಿಗೆ ಮಾತ್ರ ಮಂಜೂರಾತಿ ನೀಡಲಾಗಿರುತ್ತದೆ ತದನಂತರ, ದಿನಾಂಕ: 12-11-2021ರ ಆದೇಶದಂತೆ ನಗರ ಯೋಜನೆ ವಿಭಾಗಕ್ಕೆ 39 ಹೆಚ್ಚುವರಿ ಹುದ್ದೆಗಳನ್ನು ಹಾಗೂ ದಿನಾಂಕ: 18-01-2022ರ ಆದೇಶದಂತೆ ಕಾಮಗಾರಿ ಹಾಗೂ ಕಂದಾಯ ವಿಭಾಗಕ್ಕೆ 274 ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿ, ಇನ್ನುಳಿದ ವಿವಿಧ ವೃಂದದ 5153 ಹುದ್ದೆಗಳನ್ನು ಮಂಜೂರು ಮಾಡಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾಮಗಾರಿ ಕಂದಾಯ, ಆರೋಗ್ಯ, ಲೆಕ್ಕಪತ್ರ, ಶಿಕ್ಷಣ, ಕೌನ್ಸಿಲ್ ಮಾರುಕಟ್ಟೆ ವಿಭಾಗಗಳನ್ನು ಒಳಗೊಂಡಂತೆ ಒಟ್ಟು 28 ಕ್ಕಿಂತಲೂ ಹೆಚ್ಚು ಶಾಖೆಗಳಿದ್ದು, ವಲಯ ಮಟ್ಟ, ವಿಭಾಗ, ಉಪ ವಿಭಾಗ, ವಾರ್ಡ್ ಮಟ್ಟಗಳನ್ನು ಒಳಗೊಂಡಂತೆ ಸುಮಾರು 640 ಕ್ಕೂ ಹೆಚ್ಚು ಕಛೇರಿಗಳಿದ್ದು, ಸಾರ್ವಜನಿಕರಿಗೆ ಸೇವೆಗಳನ್ನು ಸಮರ್ಪಕವಾಗಿ ಒದಗಿಸಲು ಕಾರ್ಯನಿರತರಾಗಿದ್ದು, ಆದರೆ ಸಿಬ್ಬಂದಿಗಳ ಕೊರತೆಯಿಂದಾಗಿ ಹಾಲಿ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಹೆಚ್ಚಿನ ಕೆಲಸಕಾರ್ಯಗಳ ಒತ್ತಡವಿದ್ದು, ಅಧಿಕಾರಿ/ಸಿಬ್ಬಂದಿಗಳು ಹೆಚ್ಚಿನ ಕಾರ್ಯಕ್ಷಮತೆಯಿಂದ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 741 ಚ.ಕಿ.ಮೀ ವ್ಯಾಪ್ತಿ ಹೊಂದಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 1 ಕೋಟಿಗೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಕೋವಿಡ್-19 ಖಾಯಿಲೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸ ರೆಫರಲ್ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳನ್ನು ಅಭಿವೃದ್ಧಿಗೊಳಿಸುತ್ತಿರುವುದರಿಂದ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ವಿವಿಧ ವೃಂದದ ಹುದ್ದೆಗಳನ್ನು ಮಂಜೂರು ಮಾಡುವುದು ಅನಿವಾರ್ಯವಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಕಾರ್ಯಗಳ ಸುಗಮ ನಿರ್ವಹಣೆಗಾಗಿ ಈಗಾಗಲೇ ದಿನಾಂಕ 21-03-2019ರ ಪತ್ರದ ಮುಖೇನ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಪ್ರಸ್ತುತ ಪಾಲಿಕೆಯ ಕಾರ್ಯಸ್ವರೂಪದನ್ವಯ ಕೆಲವೊಂದು ಹೊಸ ಹುದ್ದೆಗಳನ್ನು ಸೃಜಿಸುವುದು ಹಾಗೂ ಹಾಲಿ ಪಾಲಿಕೆಯಲ್ಲಿ ಮಂಜೂರಾತಿ ಆದೇಶವಿಲ್ಲದೇ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವೊಂದು ವೃಂದದ ಹುದ್ದೆಗಳನ್ನು ಒಳಗೊಂಡಂತೆ ವಿವಿಧ ವೃಂದದ ಒಟ್ಟು 5153 ಹುದ್ದೆಗಳನ್ನು ಜರೂರಾಗಿ ಸೃಜಿಸಿಕೊಡಬೇಕೆಂದು ಕೋರಿರುತ್ತಾರೆ

ಈ ನಡುವೆ, ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಮನವಿಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯದ ಮೆಲ್ವಿಚಾರಣೆಗೆ, ಉದ್ದಿಮೆಗಳ ತಪಾಸಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನಚ್ಚರಿಕೆ ಹಾಗೂ ನಿಯಂತ್ರಣ, ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಸೇರಿದಂತೆ ಸಾರ್ವಜನಿಕ ಆರೋಗ್ಯ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಸೇವಾವಧಿಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನಲೆಯಲ್ಲಿ, ದಿನಾಂಕ: 28-11-2011 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಈ ವಿಷಯದ ಸಂಖ್ಯೆ: 22 (198)/2011-12, ದಿನಾಂಕ: 28-11-2011ರ ನಡವಳಿಯಲ್ಲಿ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತ ದೃಷ್ಟಿಯಿಂದ ವಿಧಾನಸಭಾ ಕ್ಷೇತ್ರವಾರು ಒಟ್ಟು 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ನಿರ್ಣಯಿಸಲಾಗಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಲು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ತಿದ್ದುಪಡಿ ತರಲು ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯವರು ಕಛೇರಿ ಸಂಖ್ಯೆ: ಬಿ12(4)ಪಿ.ಆರ್/137/2009-10 ದಿನಾಂಕ: 09-02-2012 ರಂದು ಸರ್ಕಾರಕ್ಕೆ ಲಿಖಿತ ಪತ್ರದ ಮೂಲಕ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಪ್ರತಿಯೊಬ್ಬ ಸರ್ಕಾರಿ ನೌಕರರಿಗೂ ತನ್ನ ಸೇವಾ ಅವಧಿಯಲ್ಲಿ ಕನಿಷ್ಟ ಮೂರು ಬಾರಿ ಪದೋನ್ನತಿ ಹೊಂದುವ ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡಬೇಕು ಎನ್ನುವ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಹಾಗೂ ಪಾಲಿಕೆಯ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸೇವಾ ಅವಧಿಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನಲೆಯಲ್ಲಿ ಹಾಗೂ ಬಿಬಿಎಂಪಿಯಲ್ಲಿ ನೇರ ನೇಮಕಾತಿ ಅಡಿಯಲ್ಲಿ ಕಿರಿಯ ಆರೋಗ್ಯ ನಿರೀಕ್ಷಕರಾಗಿ ನೇಮಕಾತಿ ಹೊಂದಿ ಹಾಲಿ ಹಿರಿಯ ಆರೋಗ್ಯ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವವರುಗಳಿಗೆ ಮುಂದಿನ ಯಾವುದೇ ಹುದ್ದೆಗೆ ಪದೋನ್ನತಿಗೆ ಅವಕಾಶ ಇಲ್ಲದ ಕಾರಣ ಹಾಗೂ ದಿನಾಂಕ: 29-11-2011 ರ ಕೌನ್ಸಿಲ್ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರ ಪದೋನ್ನತಿಗೆ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಲು ಪಾಲಿಕೆಯ ಹಿರಿಯ ಆರೋಗ್ಯ ನಿರೀಕ್ಷಕರುಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:41474 41476/2017(S-Res) ಅನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದರು. ಸದರಿ ದಾವೆಯ ಮೇಲೆ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

1) The Petitioners are before this court seeking issue of mandamus to direct respondent No.1 to consider the recommendation/Resolution at Annexures 'E' and 'F' to the petitions.

2) The petitioners contend that they are working in the respondent Corporation and if the Resolution as passes and the communication as sent by respondent No.2 is considered by respondent No.1 and appropriate orders are passed thereafter, the petitioners would be entitled to consideration to such post, thus avoiding the stagnation of the petitioners in the same post. It is in that light the petitioners are before this Court seeking that appropriate mandamus be issued in that regard.

3) A Perusal of the document at Annexure 'E' would disclose that the Standing Committee through its Resolution dated: 09.08.2016 has made the recommendation for creation of the posts. Pursuant thereto, respondent No.2 has addressed the Communication dated 14.12.2016 at Annexure 'F' seeking Consideration in this regard and for appropriate approval from respondent No.1. Since no consideration is made by Respondent No.1, the appropriate course for this court is to direct respondent No.1 to take into consideration the said Resolution and the Communication, consider all aspects of the matter and take a decision one way or the other in accordance with law, if no such decision has been taken as on today.

To enable the same, the petitioners are granted liberty of submitting one more copy of the documents along with the representation to respondent No.1 along with a copy of this order.

On receipt of the same, respondent No.1 shall be taking a decision in accordance with law as expeditiously as possible, but not later than three months from the date on which a copy of the representation is submitted.

Petitions are accordingly disposed of.

ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚಾಲ್ತಿಯಲ್ಲಿದ್ದ 1976ರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಷ್ಕರಿಸುವ ಸಲುವಾಗಿ ಪಾಲಿಕೆಯಿಂದ ದಿನಾಂಕ:21-03-2019 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಕೆಲವೊಂದು ಅನಗತ್ಯ ಹುದ್ದೆಗಳನ್ನು ರದ್ದು ಪಡಿಸುವುದು, ಪ್ರಸ್ತುತ ಪಾಲಿಕೆಯ ಕಾರ್ಯ ಸ್ವರೂಪದನ್ವಯ ಕೆಲವೊಂದು ಹೊಸ ಹುದ್ದೆಗಳನ್ನು ಸೃಜಿಸುವುದು ಹಾಗೂ ಹಾಲಿ ಪಾಲಿಕೆಯಲ್ಲಿ ಮಂಜೂರಾತಿ ಆದೇಶವಿಲ್ಲದೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆಲವೊಂದು ವೃಂದದ ಹುದ್ದೆಗಳಿಗೆ ಮಂಜೂರಾತಿಯನ್ನು ಒಳಗೊಂಡಂತೆ ಒಟ್ಟು 18091 ಹುದ್ದೆಗಳನ್ನು ಮಂಜೂರಾತಿ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಸರ್ಕಾರವು ಬಿಬಿಎಂಪಿಯ ವೃಂದ ಮತ್ತು ನೇಮಕಾತಿ ನಿಯಮಾವಳಿ ಅಧಿಸೂಚನೆ ಸಂಖ್ಯೆ ಯುಡಿಡಿ 90ಎಂಎನ್‌ಯು 2014(ಪಿ-1) ದಿ:16-03-2020ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮವಳಿಯನ್ನು ಅಂತಿಮಗೊಳಿಸಿ ಒಟ್ಟಾರೆ 12614 ಹುದ್ದೆಗಳಿಗೆ ಮಾತ್ರ ಮಂಜೂರಾತಿ ನೀಡಲಾಗಿರುತ್ತದೆ, ತದ ನಂತರ ಸರ್ಕಾರ ಆದೇಶ ಸಂಖ್ಯೆ: ನಅಇ 73 ಬಿಬಿಎಸ್ 2020 ದಿನಾಂಕ:12-II-2021 ರ ಆದೇಶದಲ್ಲಿ ನಗರಯೋಜನ ವಿಭಾಗಕ್ಕೆ 39 ಹೆಚ್ಚುವರಿ ಹುದ್ದೆಗಳನ್ನು

5

ಹಾಗೂ ಈ ಮೇಲ್ಕಂಡ ದಿನಾಂಕ: 18-01-2022ರ ಸರ್ಕಾರದ ಆದೇಶ ಸಂಖ್ಯೆ: ನಅಇ 12 ಎಂ.ಎನ್.ಯು 2021 ದಿನಾಂಕ:18-01-2022 ರಂತೆ ಕಾಮಗಾರಿ ಹಾಗೂ ಕಂದಾಯ ವಿಭಾಗಕ್ಕೆ 274 ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿದ್ದು ಇನ್ನುಳಿದ ವಿವಿಧ ವೃಂದದ 5153 ಹುದ್ದೆಗಳನ್ನು ಮಂಜೂರು ಮಾಡಿರುವುದಿಲ್ಲ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು, ಕೋವಿಡ್-19 ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಕೋವಿಡ್-19 ಖಾಯಿಲೆಯನ್ನು ಪರಿಣಾಮಕಾರಿಯಾಗಿ ತಡೆಯಲು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸ ರೆಫರಲ್ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ ಹಾಗೂ ಹೆರಿಗೆ ಆಸ್ಪತ್ರೆಗಳನ್ನು ಅಭಿವೃದ್ಧಿಗೊಳಿಸುತ್ತಿರುವುದರಿಂದ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ವಿವಿಧ ಹುದ್ದೆಗಳನ್ನು ಮಂಜೂರು ಮಾಡುವುದು ಅನಿವಾರ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ದಿನಾಂಕ: 16-03-2020ರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಆರೋಗ್ಯ ಇಲಾಖೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ವೃಂದದಿಂದ ಯಾವುದೇ ಹುದ್ದೆಗೆ ಮುಂಬಡ್ತಿಗೆ ಅವಕಾಶವಿರುವುದಿಲ್ಲ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಹುದ್ದೆಯಲ್ಲಿಯೇ ಸೇವೆಯು ಕೊನೆಗೊಳ್ಳಲಿರುವ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರು, ಬಿಬಿಎಂಪಿರವರ ದಿನಾಂಕ:21.03.2019ರ ಪತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿ ಘನತ್ಯಾಜ್ಯ ನಿರ್ವಹಣೆ, ಆರೋಗ್ಯ ವೈದ್ಯಾಧಿಕಾರಿ, ಉಪ ಆರೋಗ್ಯಾಧಿಕಾರಿ, ಆರೋಗ್ಯಾಧಿಕಾರಿಗಳ ಅಧೀನದಲ್ಲಿ ಯು.ಪಿ.ಹೆಚ್.ಸಿ ರಾಷ್ಟ್ರೀಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ದೈನಂದಿನ ಕಾರ್ಯ ಚಟುವಟಿಕೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಕಾರ್ಯ ನಿರ್ವಹಿಸಲು ವಿಭಾಗವಾರು 36 ಹೆಲ್ತ್ ಸೂಪರ್ ವೈಸರ್ ಹುದ್ದೆ ಸೃಜನೆ ಮಾಡುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದರಿಂದ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ನಿರೀಕ್ಷಕರಿಗೆ ಹೆಲ್ತ್ ಸೂಪರ್‌ವೈಸರ್ ಹುದ್ದೆ ಸೃಜನೆ ಮಾಡುವ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಆದೇಶಿಸಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕರ ಆರೋಗ್ಯದ ಮತ್ತು ಘನತ್ಯಾಜ್ಯ ನಿರ್ವಹಣೆ ಕಾರ್ಯಗಳ ಹಿತದೃಷ್ಟಿಯಿಂದ ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರ ಮುಂದಿನ ಸೇವಾವಧಿ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆರೋಗ್ಯ ಇಲಾಖೆಗೆ 36 ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ತುರ್ತಾಗಿ ಸೃಜನೆ ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ: 30-07-2022ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕರ ಆರೋಗ್ಯದ ಮತ್ತು ಘನತ್ಯಾಜ್ಯ ನಿರ್ವಹಣೆ ಕಾರ್ಯಗಳ ಹಿತದೃಷ್ಟಿಯಿಂದ ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರ ಮುಂದಿನ ಸೇವಾವಧಿ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಗೆ 36 ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸುವ ಬಗ್ಗೆ ಈ ಕೆಳಕಂಡ ಅಂಶಗಳಿಗೆ ಮಾಹಿತಿಯನ್ನು ಒದಗಿಸುವಂತೆ ಪಾಲಿಕೆಯನ್ನು ಕೋರಲಾಗಿತ್ತು.

6.

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿ.
2) ಪಾಲಿಕೆಯಡಿ ಬರುವ ಆರೋಗ್ಯ ಇಲಾಖೆಯ Office Structure ವಿವರ.
3) BBMP ಅಡಿಯಲ್ಲಿ ಬರುವ ಆರೋಗ್ಯ ಇಲಾಖೆಯ ವೃಂದಗಳು. ವೃಂದ ಬಲದ ವಿವರ.
4) ಪ್ರಸ್ತಾಪಿತ ಹುದ್ದೆಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ವಿವರ.
5) ಪ್ರಸ್ತಾಪಿತ ಹುದ್ದೆಗಳ ಸೃಜನೆಯಿಂದ ಉಂಟಾಗಬಹುದಾದ ಆರ್ಥಿಕ ಹೊರೆ ವಿವರ ಹಾಗೂ ಸದರಿ ಹೊರೆಯನ್ನು ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸಲಾಗುವುದೇ?
6) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು ಎಷ್ಟು ಆಸ್ಪತ್ರೆಗಳು/ ವೈದ್ಯಕೀಯ ಚಿಕಿತ್ಸಾಲಯಗಳು ಇರುತ್ತದೆ? ಮತ್ತು ಇವುಗಳಿಗೆ ಮಂಜೂರಾಗಿರುವ ಒಟ್ಟು ಹುದ್ದೆಗಳ ವಿವರ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ದಿನಾಂಕ 02-09-2022ರ ಪತ್ರದಲ್ಲಿ, ಉಪ ಆಯುಕ್ತರು (ಆಡಳಿತ), ಬಿಬಿಎಂಪಿ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಸರ್ಕಾರವು ಕೋರಿದ್ದ ಅಂಶಗಳಿಗೆ ವಿವರವಾದ ಮಾಹಿತಿಯನ್ನು ಒದಗಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ವಿಶೇಷ/ ಉಪ ಆಯುಕ್ತರು (ಆಡಳಿತ) ಬಿಬಿಎಂಪಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (5) ರಲ್ಲಿ ಸಲ್ಲಿಸಿದ್ದ ಪ್ರಸ್ತಾವನೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ (ನೊ). ಬೆಂಗಳೂರು ರವರು/ ಹಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ ಇವರುಗಳ ದಿನಾಂಕ: 17-05-2022 ಮತ್ತು 21-05-2022ರ ಮನವಿಗಳಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಬಿಬಿಎಂಪಿಯಲ್ಲಿ 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸುವ ಬಗ್ಗೆ ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 266 ಎಂಎನ್ ಯು 2022
ಬೆಂಗಳೂರು, ದಿನಾಂಕ: 24-03-2023

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾಗಿರುವ 36 ಹಿರಿಯ ಆರೋಗ್ಯ ನಿರೀಕ್ಷಕರ (ಗ್ರೂಪ್ 'ಸಿ' ಹುದ್ದೆ) (ವೇತನ ಶ್ರೇಣಿ ರೂ.30350-58250) ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಗ್ರೂಪ್ 'ಬಿ' ಹುದ್ದೆಗೆ (ವೇತನ ಶ್ರೇಣಿ ರೂ 43100-83900) ಈ ಕೆಳಕಂಡ ಷರತ್ತಿಗೊಳಪಟ್ಟು ಉನ್ನತೀಕರಿಸಿ ಆದೇಶಿಸಿದೆ.

**ಷರತ್ತುಗಳು:**

1) ಪ್ರಸ್ತಾವನೆಯಲ್ಲಿ ಉನ್ನತೀಕರಿಸಿದ 36 ಹುದ್ದೆಗಳ ವೇತನ, ಪಿಂಚಣಿ ಮತ್ತು ಭತ್ಯೆಗಳನ್ನು ಬಿಬಿಎಂಪಿಯು ತನ್ನ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
2) ಹೊಸದಾಗಿ ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಹೆಚ್ಚಿನ ಕೆಲಸದ ಒತ್ತಡ ಇರುವ ಪಾಲಿಕೆಯ ವಲಯವಾರು/ವಿಭಾಗವಾರು/ ಉಪ ವಿಭಾಗವಾರು/ ವಾರ್ಡ್ ವಾರು ಹಂಚಿಕೆ ಮಾಡತಕ್ಕದ್ದು.

3) ಮೇಲ್ಕಂಡಂತೆ ಉನ್ನತೀಕರಿಸಿದ, ಹೆಲ್ತ್ ಸೂಪರ್ ವೈಸರ್ ಗಳು ಈ ಕೆಳಕಂಡ ಕರ್ತವ್ಯ ಮತ್ತು ಜವಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

a) Implementation of various national health programmes which are implemented through UPHC. Monitoring and supervising senior/junior health inspectors and field staff of Public Health and Solid Waste Management (SWM).

b) Monitoring and Supervision of Sanitary Daffedars, Pourakamikas and Marshal's in collection, Secondary Storage, Transportation and scientific disposal of Waste generated in BBMP Limit.

c) Implementation of National health programs.

d) Maintenance of vital statistics.

e) Vector borne disease control activities.

f) Regulation of trades.

g) Control and management of communicable diseases.

h) Monitoring of Primary health care delivery and referral system.

i) Enforcement of banned plastic usage.

ಮೇಲ್ಕಂಡಂತೆ ಉನ್ನತೀಕರಿಸಿದ ಈ ಹುದ್ದೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಸೇರ್ಪಡೆಗೊಳಿಸಲು ಪ್ರತ್ಯೇಕವಾಗಿ ಕ್ರಮವಹಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ತನ್ನ ಹಿಂಬರಹ ಸಂಖ್ಯೆ: ಆಇ 473 ವೆಚ್ಚ-9/ 2022, ದಿನಾಂಕ: 21-03-2023 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಲಕ್ಷ್ಮೀಸಾಗರ್.ಎನ್.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ)

**ಇವರಿಗೆ:**

ಸಂಕಲನಕಾರರು, ಸರ್ಕಾರಿ ಕೇಂದ್ರ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು- ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ 150 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ), ಕೊಠಡಿ ಸಂಖ್ಯೆ:440, ಬೆಂಗಳೂರು ಇವರಿಗೆ ಒದಗಿಸುವಂತೆ ಕೋರಲಾಗಿದೆ.

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು (A&E)/(G&SSA)/(E&RSA), ಕರ್ನಾಟಕ, ಬೆಂಗಳೂರು
2. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು